ಪಶು ಆಸ್ಪತ್ರೆಗಳ ಮಂಜೂರಾತಿ ಬಗ್ಗೆ

3142 - ಶ್ರೀ ಜೆ.ಟಿ. ಪಾಟೀಲ್(ಬೀಳಗಿ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *1999-2000ನೇ ಸಾಲಿನಲ್ಲಿ ಪಶುವೈದ್ಯ ಆಸ್ಪತ್ರೆಗಳನ್ನು ಮಂಜೂರು ಮಾಡಲಾಗಿದೆಯೇ : ಮಂಜೂರು ಮಾಡಿದ್ದರೆ ರಾಜ್ಯದ ಯಾವ ಯಾವ ಭಾಗಕ್ಕೆ ಮಂಜೂರು ಮಾಡಲಾಗಿದೆ. ಅದರ ಸಂಪೂರ್ಣ ಮಾಹಿತಿ ಒದಗಿಸುವುದು?*

2. *ಪಶುವೈದ್ಯ ಆಸ್ಪತ್ರೆಗಳಲ್ಲಿ ವೈದ್ಯರು ಹಾಗೂ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ವೈದ್ಯರು ಹಾಗೂ ಸಿಬ್ಬಂದಿ ಕೊರತೆ ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

1) 1999-2000ರಲ್ಲಿ ಯಾವುದೇ ಪಶು ವೈದ್ಯಕೀಯ ಸಂಸ್ಥೆಗಳನ್ನು ಮಂಜೂರು ಮಾಡಿರುವುದಿಲ್ಲ.

2) ಹೌದು, ಪಶುವೈದ್ಯಾಧಿಕಾರಿಗಳ ಹಾಗೂ ಪಶುವೈದ್ಯ ಸಹಾಯಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಜಾಗತಿಕ ಬ್ಯಾಂಕ್ ನೆರವಿನಿಂದ ರಸ್ತೆಗಳ ಸುಧಾರಣೆ

3143 - ಶ್ರೀ ಪಾಟೀಲ್ ಜೆ.ಟಿ. (ಬೀಳಗಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಾಗತಿಕ ಬ್ಯಾಂಕ್ ಯೋಜನೆ ಅಡಿಯಲ್ಲಿ ತೆಗೆದುಕೊಳ್ಳಲಾದ ರಸ್ತೆಗಳ ಸುಧಾರಣೆ ಕೆಲಸ ಯಾವಾಗ ಪ್ರಾರಂಭವಾಗುವುದು?

ಆ) ಪ್ರಥಮ ಹಂತದಲ್ಲಿ ಯಾವ ರಸ್ತೆಗಳು ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಧರ್ಮ್ ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಮೊದಲನೆ ಹಂತದ ಕೆಲಸವನ್ನು ಜುಲೈ 2001ರಲ್ಲಿ ಪ್ರಾರಂಭ ಮಾಡಲು ಯೋಜಿಸಿದೆ.

ಆ) ಮೊದಲನೆಯ ಹಂತದಲ್ಲಿ 11 ಕೆಲಸಗಳನ್ನು ಮೇಲ್ದರ್ಜೆಗೇರಿಸಲು ಮತ್ತು 21 ಕೆಲಸಗಳನ್ನು ಮುಖ್ಯ ನಿರ್ವಹಣೆಗೆ ಕೈಗೆತ್ತಿಕೊಳ್ಳಲಾಗುವುದು. (ರಸ್ತೆಗಳ ಪಟ್ಟಿ ಲಗತ್ತಿಸಲಾಗಿದೆ)